

## ಪೆರುಂದೇವಿ

ಸಮಕಾಲೀನ ತಮಿಳು ಸಾಹಿತ್ಯದಲ್ಲಿ ಪೆರುಂದೇವಿ ಮುಖ್ಯವಾದ ಬರಹಗಾರ್ತಿ. ಕಳೆದ ಇಪ್ಪತ್ತು ವರ್ಷಗಳಲ್ಲಿ ಒಂಭತ್ತು ಕವನ ಸಂಕಲನ, ಎರಡು ಕಥಾಸಂಕಲನ ಮತ್ತು ಎರಡು ಲೇಖನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ತಮಿಳಿನ ಮುಖ್ಯ ಪತ್ರಿಕೆ, ಮಾಸಿಕಗಳಲ್ಲಿ ಪ್ರಕಟವಾಗುತ್ತಿರುವ ಇವರ ಬರಹಗಳು ಪ್ರಧಾನವಾಗಿ ಸಮಕಾಲೀನ ಸಮಾಜ, ಹೆಣ್ಣಿನ ಪ್ರಶ್ನೆಗಳು ಮತ್ತು ಅಭಿವ್ಯಕ್ತಿಗಳು ಹಾಗೂ ಸಂಸ್ಕೃತಿ ಕುರಿತಾದ ಅಂಶಗಳನ್ನು ಒಳಗೊಂಡಿರುತ್ತವೆ. ಅಮೆರಿಕದ ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿರುವ ಇವರು ಪ್ರಸ್ತುತ ನ್ಯೂಯಾರ್ಕ್‌ನ ಸಿಯಾನ್ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಂದೇಹದ ನೋಟಗಳಲ್ಲೇ ಗ್ರಹಿಸುತ್ತಿದ್ದೆವು. ಆದಷ್ಟು ಪೂರ್ವಗ್ರಹಗಳಿಲ್ಲದ, ಪಕ್ಷಪಾತಿ ಧೋರಣೆಗಳಿಂದ ಹೊರತಾದ ನೋಟಗಳಾಗಿದ್ದವು ಅವು.

◆ **ಕನಕರಾಜ್: ಜಗತ್ತನ್ನೇ ಅಲುಗಾಡಿಸಿದ ಕೋವಿಡ್ ಕಾಲಘಟ್ಟದಲ್ಲಿ ಪ್ರಭುತ್ವದ ಅಧಿಕಾರ ಮತ್ತಷ್ಟು ಗಟ್ಟಿಯಾಗಿ, ಜನಸಾಮಾನ್ಯರ ಮೇಲಿನ ಅದರ ಯಜಮಾನ್ಯ ಎಂದೆಂದಿಗಿಂತಲೂ ತೀವ್ರವಾಗಿದೆ. ಕೋವಿಡೋತ್ತರ ಕಾಲಘಟ್ಟದಲ್ಲಿ ಅದು ಮತ್ತಷ್ಟು ತೀವ್ರ ಗತಿಗೆ ಹೋಗಬಹುದು ಎನಿಸಿದೆಯೇ?**

ಅರ್ಜೆಂಟೈನಾದ ಮಟ್ಟಿಗೆ ಮಾತ್ರ ನಾನಿಲ್ಲಿ ಉತ್ತರಿಸುತ್ತೇನೆ. ಕೋವಿಡ್ ಅನ್ನು ಎದುರಿಸಲು ಸೂಕ್ತವಾದ ಆಸ್ಪತ್ರೆ, ಬೆಡ್‌ಗಳ ಸಂಖ್ಯೆ ಇದ್ದ ಕಾರಣ ನಿಯಂತ್ರದಲ್ಲಿತ್ತು. ಆದರೆ, ಬಲಪಂಥೀಯ ಸಂಘಟನೆಗಳಿಂದ ನಿಯಂತ್ರಣದ, ದ್ವೇಷದ ಸನ್ನಿವೇಶಗಳು ಎದುರಾಗುತ್ತಿದ್ದವು. ಅವರು ದ್ವೇಷಪೂರಿತ ಮಾತುಗಳನ್ನು ಉಗುಳುತ್ತಾ ಸಂಘರ್ಷಮಯ ವಾತಾವರಣವನ್ನು ಸೃಷ್ಟಿಸುತ್ತಿದ್ದರು. ಸರ್ಕಾರದ ಕೋವಿಡ್ ನಿಯಂತ್ರಣದ ನಡವಳಿಕೆಗಳ ವಿರುದ್ಧ ರಸ್ತೆಗಿಳಿದು ಪ್ರತಿಭಟನೆ ನಡೆಸುತ್ತಿದ್ದರು. ಇವತ್ತಿಗೂ ನಡೆಸುತ್ತಿದ್ದಾರೆ.

ಯಾವ ಅಧಿಕಾರದ ನೆಲೆಗಳೂ ತೀವ್ರ ಗತಿಗೆ ಹೋಗುವುದಿಲ್ಲ ಎಂಬ ನಂಬಿಕೆ ನನ್ನದು. ಬಹುತ್ವ ಜಗತ್ತಿನ ಬಹುಮುಖ್ಯ ಅಂಶ. ವೈರುಧ್ಯದ ನೆಲೆಗಳನ್ನು ಇಲ್ಲಿ ಜೋಡಿಸಬೇಕಿದೆ. ಜಾಗತೀಕರಣ ಎಂದುಕೊಂಡು ನಾವೇನು ಮಾಡುತ್ತಿದ್ದೇವೆ? ಭೂಮಿಯನ್ನು ಹೇಗೆಲ್ಲಾ ನಾಶ ಮಾಡುತ್ತಿದ್ದೇವೆ ಎನ್ನುವುದನ್ನು ಗಮನಿಸಿ... ಕೆಲವು ಜನಸಮೂಹಗಳು ಪ್ರಪಂಚದ ನಕ್ಷೆಯಿಂದ ಕಾಣೆಯಾಗುತ್ತಿವೆಯೆಂದೇ ತೋಚುತ್ತದೆ.

◆ **ಪೆರುಂದೇವಿ: ನಿಮ್ಮ ಕೃತಿಗಳಲ್ಲಿ ಅಲ್ಲಲ್ಲಿ ಕ್ರೈಸ್ತ ಸಂಕೇತಗಳು ಕಾಣಸಿಗುತ್ತವೆ. ಉದಾಹರೆಗೆ, The trial of the Virgin and other stories ರೀತಿಯ ಸಂಕಲನಗಳಲ್ಲಿ ಚರ್ಚ್, ಶಿಲುಬೆಗಳು ಮಿಂಚಿನಂತೆ ಅಲ್ಲಲ್ಲಿ ಹಾದುಹೋಗುತ್ತವೆ. ನಿಮ್ಮ ಕಥೆಗಳಲ್ಲಿ ಬರುವ ಕ್ರೈಸ್ತ ಪ್ರಭಾವದ ಬಗ್ಗೆ ಹೇಳಬಹುದೇ? ಧಾರ್ಮಿಕ ನಂಬುಗೆಗಳು ನಿಮ್ಮ ಬರಹಗಳನ್ನು ಪ್ರಭಾವಿಸಿವೆಯೇ?**

'ಕೆಥೋಲಿಕ್ ನಾಡು' ಎಂದು ಕರೆಯಲಾಗುವ ಪ್ರದೇಶಕ್ಕೆ ಸೇರಿದವಳು ನಾನು. ಕ್ರಿಶ್ಚಿಯನ್ ಆಗಿಯೇ ಬೆಳೆದೆ. ಆದರೆ, ತೀವ್ರ ಕ್ರಿಶ್ಚಿಯನ್ನಾಗಿ ಅಲ್ಲ. ಒಳಮನಸ್ಸಿನ ದನಿಯಂತೆ ಭಿನ್ನ ದಾರಿಯಲ್ಲಿ ನಡೆಯುವ ಗುಣವುಳ್ಳವಳು ನಾನು. ಎದೆಯ ದನಿಯಂತೆ ನಡೆಯುವ 'ಅನಿಮಿಸ್ಟ್'(ಪ್ರಕೃತಿವಾದಿ). ಹಾಗಾಗಿ ಸಂಘಟನಾತ್ಮಕ ಏಕದೇವೋಪಾಸನೆಯ ಧರ್ಮಗಳ ಬಗ್ಗೆ ನನಗೆ ಸಹಮತವಿಲ್ಲ. ಬಹುದಿನಗಳಿಂದ ನಾನು ಹೇಳುತ್ತಿರುವಂತೆ ಹಟವಾದಿ